# ಶಂಖನಾದದ ಮಹತ್ವ

ಮಂಗಳಮ್ಮ ಸಿ.ಎಸ್.

ಭಾರತದಲ್ಲಿ ಸಕಲ ಮತ, ಧರ್ಮ, ಪಂಥದವರಿಗೂ ಪೂಜ್ಯವಾದ ಗ್ರಂಥ ಭಗವದ್ಗೀತೆ. ಇದರಲ್ಲಿ ಮೊದಲನೆಯ ಅಧ್ಯಾಯದಲ್ಲಿ ಬರುವ ಶಂಖನಾದವು ಹತ್ತು ಹಲವು ವಿಶಿಷ್ಟ ಅರ್ಥಗಳನ್ನು ಹೊರಸೂಸುವಂತಿದೆ. ಈ ಕುರಿತು ಇಲ್ಲಿ ಲೇಖಕಿ ವಿವರಿಸಿದ್ದಾರೆ. ಒಂದು ಸುದ್ದಿಮಾಧ್ಯಮದ ಪ್ರವಚನದಿಂದ ಪ್ರಭಾವಿತರಾಗಿ ಈ ಲೇಖನವನ್ನು ಬರೆಯಲಾಗಿದೆ. ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಗ್ರಂಥಗಳನ್ನು ರಚಿಸಿರುವ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

**ವೇ**ದವ್ಯಾಸ ವಿರಚಿತ 'ಮಹಾಭಾರತ' ಗ್ರಂಥದ ಮಧ್ಯ ಭಾಗದಲ್ಲಿ ಬರುವ ಒಂದು ಪ್ರಸಂಗ. ಶ್ರೀಕೃಷ್ಣ-ಅರ್ಜುನರ ಸಂವಾದ. ಶ್ರೀಕೃಷ್ಣನು ಅರ್ಜುನನ್ನು ಕರ್ತವ್ಯನಿಷ್ಠನನ್ನಾಗಿ ಜಾಗೃತಗೊಳಿಸುವುದಕ್ಕೆ ಹೇಳಿದ ನುಡಿಗಳೇ 'ಶ್ರೀಮದ್ಭಗವದ್ಗೀತೆ'. ಇದು ಪ್ರತಿಯೊಬ್ಬರಿಗೂ ಅನ್ವಯವಾಗುತ್ತದೆ. ಅವರವರ ಭಾವಕ್ಕೆ ತಕ್ಕಂತೆ, ಸಮಯಕ್ಕೆ ತಕ್ಕಂತೆ, ವಿಶೇಷವಾಗಿ, ಮನಸ್ಸು ಸಂದಿಗ್ಧತೆಯಲ್ಲಿ ಸಿಲುಕಿಗೊಂಡಾಗ ಪರಿಹಾರವನ್ನೂ ನೀಡುವ ಅಮೃತವಾಣಿ! ಕುರುಕ್ಷೇತ್ರದಲ್ಲಿ ಕೌರವರು-ಪಾಂಡವರು ಯುದ್ಧ ಸನ್ನದ್ಧರಾಗಿ ನಿಂತಿದ್ದಾಗ, ಅರ್ಜುನ ಶತ್ರುಪಕ್ಷದವರನ್ನೂ ಮಿತ್ರಪಕ್ಷದವರನ್ನೂ ನೋಡಿ, ಈ ಯುದ್ಧದಲ್ಲಿ ಎಷ್ಟೊಂದು ಜನರ ಹತ್ಯೆ ಆಗುತ್ತದೆ. ಅವರ ನೆಂಟರಿಷ್ಟರು ಅನಾಥರಾಗುತ್ತಾರೆ ಎಂಬ ಭಾವನೆ ಮೂಡುತ್ತಿದ್ದಂತೆಯೇ, ತನ್ನ ರಥದ ಸಾರಥಿಯಾದ ಶ್ರೀಕೃಷ್ಣನಿಗೆ 'ಇವರನ್ನೆಲ್ಲ ಕೊಲ್ಲುವುದು ಪಾಪಕಾರ್ಯ. ನಾನು ಯುದ್ಧ ಮಾಡಲಾರೆ' ಎಂದು, ಗಾಂಡೀವವನ್ನು ಕೆಳಗಿಟ್ಟು ಕುಳಿತುಬಿಡುತ್ತಾನೆ. ಶ್ರೀಕೃಷ್ಣನ ಅವತಾರವಾಗಿದ್ದು 'ಧರ್ಮ-ಸಂಸ್ಥಾಪನೆ' ಗಾಗಿಯೇ; ಅಧರ್ಮವನ್ನು ಖಂಡಿಸಲೇಬೇಕು. ತಾನು ಆಯುಧವನ್ನು ಹಿಡಿಯುವುದಿಲ್ಲವೆಂಬ ಶಪಥಕ್ಕೆ ಅನುಗುಣವಾಗಿ ಅರ್ಜುನ, ಹಾಗೂ ಇತರರ ಮೂಲಕ ದುಷ್ಟಶಿಕ್ಷಣ ಮಾಡಲು ನಿರ್ಧರಿಸಿ, ಈಗ ಅರ್ಜುನನನ್ನೇ ಕರ್ತವ್ಯಮುಖನನ್ನಾಗಿ ಮಾಡಲು ಹೇಳಿದ ಭಾಗವೇ 'ಭಗವದ್ಗೀತೆ.'

ಈ ಘಟನೆಗೆ ಮುಂಚೆ, ಎರಡೂ ಸೇನೆಗಳ ಸೇನಾಧಿಪತಿಗಳ (ಭೀಷ್ಮಾಚಾರ್ಯರು ಕೌರವರ ಸೇನಾಧಿಪತಿಗಳು, ಪಾಂಡವರ ಕಡೆ ಧೃಷ್ಟದ್ಯುಮ್ನ) ನೇತೃತ್ವದಲ್ಲಿ ಸೇನೆ ಸಜ್ಜಾಗಿ ನಿಂತಿದೆ. ನಾಯಕರ ಸೂಚನೆಗಾಗಿ ಕಾಯುತ್ತಿವೆ. ಆಗ ದುರ್ಯೋಧನನು ದ್ರೋಣಾಚಾರ್ಯರ ಬಳಿಗೆ ಬಂದು, ತನ್ನ ಕಡೆಯಲ್ಲಿರುವ ಅತಿರಥ ಮಹಾರಥರ ಹೆಸರುಗಳನ್ನು ಹೇಳುತ್ತಾನೆ. ಪಾಂಡವರ ಪಕ್ಷದವರ ಬಗ್ಗೆಯೂ ಹೇಳುತ್ತಾ, 'ಪಿತಾಮಹ ಭೀಷ್ಮರ ನಾಯಕತ್ವದಲ್ಲಿ ನಮ್ಮ ಸೇನೆ ಸುರಕ್ಷಿತವಾಗಿದೆ. ಆದರೂ ನೀವೆಲ್ಲರೂ ಭೀಷ್ಮರನ್ನು ರಕ್ಷಿಸತಕ್ಕದ್ದು' ಎನ್ನುತ್ತಿದ್ದಾಗ, ಭೀಷ್ಮಾಚಾರ್ಯರು ದುರ್ಯೋಧನನನ್ನು ಸಂತೋಷಗೊಳಿಸಲೆಂದೇ ಶಂಖನಾದವನ್ನು ಮಾಡುತ್ತಾರೆ. ಜೊತೆ-ಜೊತೆಗೇ ಇತರರ ಶಂಖಧ್ವನಿಗಳೂ, ರಣವಾದ್ಯಗಳೂ ಮೊಳಗಿದವು.



ಭಗವದ್ಗೀತೆಯನ್ನು ಕುರಿತು ವಿಶ್ವಮಾನ್ಯರಾದ ವಿದ್ವಾಂಸರುಗಳಿಂದ ಹಿಡಿದು, ಸಾಮಾನ್ಯ ಅರಿವುಳ್ಳವರೂ ಸಹ ಅವರವರ ಅರ್ಹತಗೆ ತಕ್ಕಂತೆ ಅಗಣಿತವಾದ ಲೇಖನಗಳನ್ನು ಬರೆದಿದ್ದಾರೆ. ಪ್ರವಚನ ನೀಡಿದ್ದಾರೆ. ಇಂದಿಗೂ ಭಗವದ್ಗೀತೆಯ ಬಗ್ಗೆ ವಿಚಾರ, ವಿಮರ್ಶೆಗಳು ನಡೆಯುತ್ತಲೇ ಇವೆ. ಇದೇ ಭಗವದ್ಗೀತೆಯ ವಿಶೇಷತೆ. ಅದು ಅಮರವಾಣಿ, ಜೀವನಧರ್ಮಯೋಗ. ಎಷ್ಟೋ ವಿಷಯಗಳು ಹೊಸ ಹೊಸ ರೀತಿಯಲ್ಲಿ ಭಗವ

ದ್ಗೀತೆಯ ಮಹತ್ವವನ್ನು ಹೆಚ್ಚಿಸುತ್ತಲೇ ಇವೆ. 'ಶಂಖನಾದ' ಮಂಗಳಸೂಚಕ ಧ್ವನಿ. ಶುಭಕಾರ್ಯಗಳ ಪ್ರಾರಂಭದಲ್ಲಿ ಶಂಖ ಧ್ವನಿ ಮಾಡುವುದು ಸಂಪ್ರದಾಯ. ಉತ್ತರ ಭಾರತದಲ್ಲಿ ಇದಕ್ಕೆ ವಿಶೇಷವಾದ ಮನ್ನಣೆ ಇದೆ.

ಭೀಷ್ಮಾಚಾರ್ಯರು ಕುರುಕ್ಷೇತ್ರದಲ್ಲಿ ಯುದ್ಧಾರಂಭಕ್ಕೆ ಮುಂಚೆ, ದುರ್ಯೋಧನನನ್ನು ಸಂತೋಷಗೊಳಿಸಲೆಂದು ಶಂಖನಾದ ಮಾಡಿದರು ಎಂದು ಗೀತೆಯಲ್ಲಿ ಹೇಳಿರುವುದು ಸರಿಯಷ್ಟೆ. ಕುರುಕ್ಷೇತ್ರ ರಣರಂಗ, ಅಲ್ಲಿ ನಡೆಯುವುದೆಲ್ಲ ಒಂದು ರೀತಿಯಲ್ಲಿ ಕ್ರೌರ್ಯ, ಹಿಂಸೆ, ಹತ್ಯೆಗಳೇ ಅಲ್ಲವೆ? ಮಂಗಳಕರವಾದ ಶಂಖನಾದ ಇಲ್ಲಿಗೆ ಅಗತ್ಯವೆ? ಅದೂ ಅಧರ್ಮಿಯಾದ ದುರ್ಯೋಧನನ ಸಂತೋಷಕ್ಕಾಗಿ, ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಭೀಷ್ಮಾಚಾರ್ಯರು ಲೋಕ ಹಿತೈಷಿಗಳು. ಕರ್ತವ್ಯನಿಷ್ಠುರರು. 'ಹಸ್ತಿನಾಪುರದ ರಾಜವಂಶವನ್ನು ರಕ್ಷಿಸುತ್ತೇನೆ' ಎಂಬ ತಮ್ಮ ಶಪಥದಂತೆ, ದುರ್ಯೋಧನನ ಕಡೆ ಹಿರಿಯರಾಗಿ ನಿಂತು ಸೇನಾಧಿಪತ್ಯವನ್ನು ವಹಿಸಿಕೊಂಡರು. ಶ್ರೀಕೃಷ್ಣನು 'ಧರ್ಮಸಂಸ್ಥಾಪನೆ'ಗಾಗಿಯೇ ಅವತರಿಸಿರುವನೆಂಬುದನ್ನೂ ಅವನು 'ಪರಮಾತ್ಮ'ನೆಂಬುದನ್ನೂ ಭೀಷ್ಮಾಚಾರ್ಯರು ಅರಿತಿದ್ದರು. ಧರ್ಮಕ್ಕೇ ಜಯವೆಂಬುದೂ ತಿಳಿದಿತ್ತು. ಇವರ ಶಂಖಧ್ವನಿ ಮೊಳಗುತ್ತಿದ್ದಂತೆಯೇ, ರಣವಾದ್ಯಗಳು ಮೊಳಗತೊಡಗಿದವು. ಅದು ಎದೆಯನ್ನು ನಡುಗಿಸುವಂತಹ ಭೀಕರ ಧ್ವನಿಯಾದ್ದರಿಂದ ಧೃತರಾಷ್ಟ್ರನೇ ಮೊದಲಾದವರು (ಯಾರು ಅಧರ್ಮಿಗಳೋ ಅವರು) ಕಂಪನಕ್ಕೊಳಗಾದರು. 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿನೋಡಿಕೊಳ್ಳುವಂತಹವರು'. ಭೀಷ್ಮಾಚಾರ್ಯರ ಶಂಖನಾದ ಲೋಕ ಮಂಗಳಕ್ಕಾಗಿ ಎಂಬುದು ಸುಸ್ಪಷ್ಟವಾದದ್ದು.

ಶಂಖವನ್ನು ಬಾಯಿಯ ಮುಂದೆ ಇಟ್ಟುಕೊಂಡು, ಉಸಿರಿನ ಮೂಲಕ ಊದಿದಾಗ, ಧ್ವನಿ ಹೊರಬೀಳುತ್ತದೆ ಅಲ್ಲವೆ? ಕಂಠನಾಳದಿಂದ ಉಸಿರು ಹೊರಬಿದ್ದಾಗ 'ಹ' ಎಂಬ ಧ್ವನಿ ಹೊರಡುತ್ತದೆ. ಆದರೆ ಬಾಯಿಂದ ಹೊರಟಾಗ ಕೇಳುವ ಧ್ವನಿ ಘಂಟಾನಾದದಂತೆ ಕೇಳುತ್ತದೆ. ನಾಲ್ಕೂ ಕಡೆಯೂ ಪ್ರತಿಧ್ವನಿತವಾಗುತ್ತದೆ. ಯಾವುದೇ ಧ್ವನಿ ಆಗಲಿ ಅದರ ಮೂಲ ಸ್ಥಾನ ಹೃದಯ. ನಂತರ ಕಂಠದಿಂದ ಬಾಯಿಯವರೆಗಿನ ಸ್ಥಾನಗಳ ಮೂಲಕ ಧ್ವನಿ ವ್ಯತ್ಯಾಸವಾಗುತ್ತದೆ. ಭಾವನೆಯನ್ನು ಹೊರಗೆಡಹುವುದು ಹೃದಯದಿಂದ. ಹೃದಯವೇ 'ಆತ್ಮ'ನ ನೆಲೆ. ಪರಮಾತ್ಮನ ದೇಗುಲ. ಆದ್ದರಿಂದ ಅಲ್ಲಿಂದ ಹೊರಡುವ ಪ್ರತಿಧ್ವನಿಯೂ ಮಂಗಳಕರವಾದದ್ದು. ಕ್ರಮೇಣ ಧ್ವನಿ ಹೊರಬೀಳುವವರೆಗಿನ ಬುದ್ಧಿಯು ಸಹವಾಸದಿಂದ, ಅದು ನಿರ್ಮಲವೂ ಆಗಬಹುದು ಅಥವಾ ಮಾಲಿನ್ಯವೂ ಆಗಬಹುದು, ಭಾವಕ್ಕೆ ತಕ್ಕಂತೆ. ಇಲ್ಲಿ ಭೀಷ್ಮಾಚಾರ್ಯರ ಶಂಖಧ್ವನಿ, ಲೋಕ ಮಂಗಳಕ್ಕಾಗಿ ಹೃದಯಪೂರ್ವಕವಾಗಿ ಹೊರಟ ಧ್ವನಿ. ಧರ್ಮಸಂಸ್ಥಾಪನಾಚಾರ್ಯನ ಕಾರ್ಯಕ್ಕೆ ಬೆಂಬಲವಾಗಿ ಅದು ಹೊರಟಿತು. ಧರ್ಮಪರಾಯಣರಾದ್ದರಿಂದ ಉಪ್ಪುಂಡ ಮನೆಯ ಋಣ ತೀರಿಸಲು ಕರ್ತವ್ಯನಿಷ್ಠರಾಗಿದ್ದಾರೆ. ಇದರಲ್ಲಿ ಎಳ್ಳಷ್ಟೂ ಮೋಸಮಾಡಲಿಲ್ಲ. ದಿನಕ್ಕೆ ಹತ್ತು ಸಹಸ್ರ ಅತಿರಥ–ಮಹಾರಥರನ್ನು ಸೋಲಿಸಿ, ಕೌರವರ ಕಡೆ ಸೇನಾಧಿಕಾರವನ್ನು ನಿಷ್ಪಕ್ಷಪಾತದಿಂದ ನಿರ್ವಹಿಸಿದ್ದಾರೆ.

'ಶಂಖಧ್ವನಿ' ಹೃದಯಾಂತರಾಳದಿಂದ ಹೊರಟು, ಹೊರಗಡೆ ಧ್ವನಿಯಾಗಿ ಮೊಳಗುತ್ತದೆ ಎಂದಂತೆ ಆಯಿತು. ವೇದವ್ಯಾಸರು ಮಹಾಭಾರತವನ್ನು ವಿಸ್ತಾರವಾಗಿ ಬರೆದಿದ್ದಾರೆ. ಕುರುಕ್ಷೇತ್ರದ ವಿವರಣೆಯನ್ನೂ ಅಷ್ಟೇ ವಿಶಾಲವಾಗಿಯೇ ಬರೆದಿದ್ದಾರೆ. ಶಂಖಧ್ವನಿಯ ವಿಚಾರದಲ್ಲಿ ಮಾತ್ರ ಒಂದು ಮಿತಿಯನ್ನು ಹಾಕಿಬಿಟ್ಟಿದ್ದಾರೆ ಎನ್ನಬಹುದು. ಎರಡೂ ಕಡೆಯವರಿಂದ ಶಂಖಧ್ವನಿ ಮೊಳಗಿತು ಎಂದಷ್ಟೇ ಹೇಳಲಿಲ್ಲ. ಕೇವಲ ಆರು ಜನರ ಶಂಖಗಳಿಗೆ ಹೆಸರನ್ನು ಹೇಳಿದ್ದಾರೆ. ಪಿತಾಮಹ ಭೀಷ್ಮರ ಶಂಖಕ್ಕೋ – ಹೆಸರಿಲ್ಲ! ಒಬ್ಬೊಬ್ಬರ ಮೂಲಕ ಒಂದೊಂದು ರೀತಿಯ ವಿಶೇಷತೆಗಳ ಹೇಳಿಕೆಗಳು ಭಗವದ್ಗೀತೆಯ ಮಹತ್ವವನ್ನು ಹೆಚ್ಚಿಸುತ್ತವೆ.

ಭೀಷ್ಮಾಚಾರ್ಯರ ಶಂಖಧ್ವನಿ ಮೊಳಗುತ್ತಿದ್ದಂತೆಯೇ ಪಾಂಡವರ ಕಡೆಯಿಂದ ಶ್ರೀಕೃಷ್ಣ ತನ್ನ ಪಾಂಚಜನ್ಯವನ್ನು ಊದುತ್ತಾನೆ. ಜೊತೆಯಲ್ಲಿ ಮತ್ತೈದು ಶಂಖಧ್ವನಿಗಳೂ ಮೊಳಗುತ್ತವೆ.

**ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।**
**ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥**
**ಅನಂತವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।**
**ನಕುಲಃ ಸಹ ದೇವಶ್ಚ ಸುಘೋಷಮಣಿಪುಷ್ಪಕೌ ॥**

*(ಗೀತೆ, ೧. ೧೫–೧೬)*

ಈ ಆರು ಶಂಖಧ್ವನಿಗಳ ಹಿರಿಮೆ ಈ ರೀತಿ ಇದೆ. ಎರಡೂ ಸೇನೆಯ ಕಡೆಯವರು ತಮ್ಮ ತಮ್ಮ ಪಕ್ಷಗಳಿಗಾಗಿ ಹೋರಾಡಿದರು. ಧರ್ಮಸಂಸ್ಥಾಪನೆಗಾಗಿ ಹೃತ್ಪೂರ್ವಕವಾಗಿ ಸಂಕಲ್ಪ ಮಾಡಿ, ಜಯ ಗಳಿಸುವುದರ ಮೂಲಕ ಹೋರಾಟಕ್ಕೆ ಮಂಗಳ ಧ್ವನಿ ಮಾಡಿದವರು ಆರು ಮಂದಿ. ಪಿತಾಮಹಭೀಷ್ಮರು ನಾಂದಿ ಹಾಡಿದರು. ಕಾರ್ಯರೂಪಕ್ಕೆ ತಂದವರು ಈ ಆರು ಮಂದಿ ತಮ್ಮ ಶಂಖನಾದಗಳನ್ನು ಮೊಳಗಿಸಿ ರಣ ಸನ್ನದ್ಧರನಾಗಿ ಮಾಡಿದರು ಎಂದೂ ಹೇಳಬಹುದಲ್ಲವೆ?

**ಪಾಂಚಜನ್ಯ :** ಇದು ಪರಮಾತ್ಮ ಶ್ರೀಕೃಷ್ಣನ ಶಂಖದ ಹೆಸರು. ಪುರಾಣದ ಪ್ರಕಾರ, ಶ್ರೀಕೃಷ್ಣನು ತನ್ನ ಗುರುಗಳಾದ ಸಾಂದೀಪಿನಿ ಮುನಿಗಳಿಗೆ ಗುರುದಕ್ಷಿಣೆಯಾಗಿ, ಅವರ ಕಳೆದು ಹೋಗಿದ್ದ ಪುತ್ರನನ್ನು ತಂದು ಕೊಟ್ಟ. ಪಂಚಜನ ಎಂಬ ರಾಕ್ಷಸ ಗುರುಪುತ್ರನನ್ನು ಅಪಹರಿಸಿ ಸಮುದ್ರದಲ್ಲಿ, ಒಂದು ಶಂಖದಲ್ಲಿ ಅಡಗಿಸಿಟ್ಟುಕೊಂಡು, ಅದರಲ್ಲೇ ತಾನೂ ಅಡಗಿಕೊಂಡಿದ್ದ. ಶ್ರೀಕೃಷ್ಣನು ಆ ರಾಕ್ಷಸನನ್ನು ಸಂಹರಿಸಿ ಗುರುಪುತ್ರನನ್ನು ರಕ್ಷಿ

ಸಿದ. ಆ ಶಂಖವೇ 'ಪಾಂಚಜನ್ಯ'! ದೈತ್ಯನನ್ನೂ ಉದ್ಧಾರ ಮಾಡಿದ ಶ್ರೀಕೃಷ್ಣ. ಕೃಷ್ಣನ ಸಹವಾಸದಿಂದ ಶಂಖವೂ ಪವಿತ್ರವಾಯಿತು, ಧನ್ಯತೆಯನ್ನೂ ಪಡೆಯಿತು. ಪಂಚಭೂತಗಳಿಂದ ಆದದ್ದು ಈ ಶರೀರ. ಶರೀರವು ಚೈತನ್ಯದ ನೆಲೆ. ಭೂಮಿ, ಆಕಾಶ, ನೀರು, ಗಾಳಿ ಮತ್ತು ಬೆಂಕಿ ಇವು ಪಂಚಭೂತಗಳು; ಶರೀರ ಸತ್ತಾಗ ಪಂಚಭೂತಗಳಲ್ಲಿ ಪ್ರಾಣ ಲೀನವಾಗುತ್ತದೆ. ಈ ಐದೂ ಭೂತಗಳು ಶರೀರ ಹಾಗೂ ವಿಶ್ವಕಲ್ಯಾಣವನ್ನೇ ಬಯಸುತ್ತವೆ. ಶರೀರದಿಂದ ಹೊರಟ ಕಲ್ಮಷಗಳನ್ನೆಲ್ಲ ಸ್ವೀಕರಿಸಿ, ಪುನಃ ಶುದ್ಧವಾದುದನ್ನೇ ಕೊಡುತ್ತವೆ. ಇವುಗಳಿಂದ ಮನುಷ್ಯ ಕಲಿಯಬಹುದಾದದ್ದು ಮಾನವೀಯತೆ. ಮಾನವ ತನ್ನ ಕರ್ಮಗಳಿಂದ ದೈವತ್ವಕ್ಕೇರಬಹುದು ಅಥವಾ ಪತನದತ್ತ ಜಾರಬಹುದು. ಮನುಷ್ಯ ಜನ್ಮ ದುರ್ಲಭ, ಸಿಕ್ಕಿರುವ ಅವಕಾಶದಲ್ಲಿ ಎತ್ತರಕ್ಕೆ ಏರಬೇಕು. ದಾರಿ ತಪ್ಪಿದಾಗ (ಅಧರ್ಮ ಹೆಚ್ಚಾದಾಗ) ಈ ಐದೂ ಭೂತಗಳು ಕಾಲಕಾಲಕ್ಕೆ ಶಿಕ್ಷೆಯನ್ನು ಕೊಡುತ್ತವೆ — ಭೂಕಂಪ, ಪ್ರವಾಹ, ಚಂಡಮಾರುತ, ಜ್ವಾಲಾಮುಖಿ, ಸಿಡಿಲು ಗುಡುಗುಗಳ ಮೂಲಕ. ಎಚ್ಚೆತ್ತುಕೊಳ್ಳದಿದ್ದಾಗ ಅಧರ್ಮವನ್ನು ಖಂಡಿಸಲೆಂದೇ ಅವತಾರ ಪುರುಷರು ಧರೆಗೆ ಇಳಿಯುತ್ತಾರೆ. ಶ್ರೀಕೃಷ್ಣನ ಪಾಂಚಜನ್ಯದ ಧ್ವನಿ ಜಗತ್ತನ್ನು ಎಚ್ಚರಿಸುವಂತಹದೇ ಆಗಿದೆ. 'ಪುನಃ ಮಾನವನಲ್ಲಿ ಧರ್ಮಸ್ಥಾಪನೆಗಾಗಿ ಕಟಿಬದ್ಧನಾಗಿದ್ದೇನೆ', ಎನ್ನುವ ಸೂಚನೆ ಇದು. ಶ್ರೀಕೃಷ್ಣನ ಈ ಭಾವನೆಯನ್ನು ಅರಿತವರು ಆಗ ಎಲ್ಲೋ ಬೆರಳೆಣಿಕೆಯಷ್ಟು ಮಂದಿ ಮಾತ್ರ. ಭೀಷ್ಮ, ದ್ರೋಣ, ಕೃಪ, ಧರ್ಮರಾಯ ಇತ್ಯಾದಿ. ಪಾಂಚಜನ್ಯ ಮೊಳಗಿದ್ದು ಅಧರ್ಮಿಗಳ ಹೃದಯದಲ್ಲಿ ನಡುಕವನ್ನುಂಟುಮಾಡಿತು. ಶಂಖಧ್ವನಿಯಿಂದ ಲೋಕ ಮಂಗಳಕ್ಕೆ ಸೂಚನೆ ಇತ್ತವನು ಶ್ರೀಕೃಷ್ಣ.

**ಅನಂತವಿಜಯ:** ಎರಡನೆಯದಾಗಿ ಧರ್ಮರಾಯನ ಶಂಖದ ಹೆಸರು 'ಅನಂತವಿಜಯ.' ಧರ್ಮರಾಯನ ಹೆಸರಿನಲ್ಲಿಯೇ ಈ ಶಂಖಧ್ವನಿಯ ಒಳಾರ್ಥವನ್ನು ಅರಿಯಬಹುದು. ಎಷ್ಟೇ ಕಷ್ಟ ಬಂದರೂ ಅವನು ಸುಳ್ಳು ಹೇಳಲಿಲ್ಲ. ಧರ್ಮದ ಗೆರೆ ದಾಟಲಿಲ್ಲ. ಇವನ ನಡೆಯನ್ನು ದ್ರೌಪದಿ, ಭೀಮ ಮತ್ತೆ ಕೆಲವರು ಹಂಗಿಸಿದರೂ ಅವನು ತಾಳ್ಮೆಗೆಡಲಿಲ್ಲ. ಮಾನವ ಸಹಜ ಧರ್ಮಗಳಾದ ದಯೆ, ಕ್ಷಮೆ, ವಿನಯದ ಗೆರೆ ದಾಟಲಿಲ್ಲ. ಕುರುಕ್ಷೇತ್ರದಲ್ಲಿ ನಡೆದ ಯುದ್ಧ-ಧರ್ಮ-ಅಧರ್ಮಗಳ ನಡುವೆ ಧರ್ಮಕ್ಕೇ ಜಯವೆಂಬ ಭರತವಾಕ್ಯದಲ್ಲಿ ಶ್ರದ್ಧೆಯುಳ್ಳವನು ಧರ್ಮರಾಯ. ಆಚರಣೆ ಎಲ್ಲಿ ಸುವ್ಯವಸ್ಥಿತವಾಗಿರುತ್ತದೆಯೋ ಅಲ್ಲಿ ಶಾಂತಿ, ನೆಮ್ಮದಿ ಇರುತ್ತದೆ. ಧರ್ಮರಾಯ 'ಅನಂತ ವಿಜಯ' ಶಂಖದ ಮೂಲಕ ಈ ಧ್ವನಿಯನ್ನು ತನ್ನ ಹೃದಯಾಂತರಾಳದಿಂದ ಪ್ರಪಂಚಕ್ಕೆ ಮೊಳಗಿಸಿದ್ದು, 'ಧರ್ಮೋ ರಕ್ಷತಿ ರಕ್ಷಿತಃ' ಎಂಬುದಕ್ಕೆ ಸಾಕ್ಷಿಯಾಗಿದೆ.

**'ಪೌಂಡ್ರಕ':** ಇದು ಭೀಮನು ಊದಿದ ಶಂಖದ ಹೆಸರು. ಪಾಂಡವರಲ್ಲಿ ಸಾಹಸಿಗ ಎಂದರೆ ಭೀಮ. ಭೀಮ ಶಬ್ದದ ಅರ್ಥ ಸಾಹಸವೆಂದೇ ಆಗಿದೆ. ಕಷ್ಟದ ಸಮಯಗಳಲ್ಲಿ ಪಾಂಡವರನ್ನು ಪಾರು ಮಾಡಿದವನು ಭೀಮ. ಒರಟು ಸ್ವಭಾವದವನು. ಆದರೆ ಮೃದು ಹೃದಯಿ. ಪೌಂಡ್ರ ಎಂದರೆ ಊರ್ಧ್ವಮುಖವಾದದ್ದು ಎಂಬರ್ಥವುಂಟು. ಹಣೆಯಲ್ಲಿ ಧರಿಸುವ ವಿಭೂತಿಗೆ 'ತ್ರಿಪುಂಡ್ರ' ಎನ್ನುವುದು ವಾಡಿಕೆ. ಹಾಗೆಯೇ ನಾಮಮುದ್ರೆಗಳೂ ಸಹ. ಶರೀರದಲ್ಲಿ ಉತ್ತಮಾಂಗ ತಲೆ. ಮುಂಭಾಗ ಹಣೆ ಅಥವ ಲಲಾಟ ಎದ್ದು ಕಾಣಿಸುವಂಥಾದ್ದು. ಹಣೆಬರಹ ಅಥವ ಬ್ರಹ್ಮನ ವಿಧಿಲಿಖಿತ ಇರುವುದೂ ಈ ಹಣೆಯಲ್ಲಿಯೇ, ಆದರೆ ಅದು ಅಗೋಚರ. ಹಿಂದೂ ಸಂಸ್ಕೃತಿಯಲ್ಲಿ ಹಣೆಯಲ್ಲಿ ಧರಿಸುವ ಚಿಹ್ನೆಗಳಿಗೆ ಒಂದು ವಿಶೇಷತೆಯಿದೆ. ವಿಭೂತಿ, ಭಸ್ಮ, ನಾಮ (ತಿರುಮಣಿ) ಮುದ್ರೆ, ಗೋಪೀಚಂದನ ಇವೆಲ್ಲ ಶರೀರದ ಶೀತ-ಉಷ್ಣಗಳನ್ನು ಸಮತೋಲನದಲ್ಲಿಡಲು ಸಹಕಾರಿ. ಈ ಹಣೆಯ ಚಿಹ್ನೆಗಳನ್ನು ಅಪಹಾಸ್ಯ ಮಾಡುವುದೂ ಉಂಟು. ಅದರ ಹಿನ್ನೆಲೆಯನ್ನು ಅರಿತರೆ ಒಳ್ಳೆಯದು. ಇಲ್ಲಿ ಭೀಮನ 'ಪೌಂಡ್ರಕ' ಎನ್ನುವ ಶಂಖಧ್ವನಿ 'ಜಾಗೃತರಾಗಿ, ಏಳಿ, ಎದ್ದೇಳಿ' ಎನ್ನುವ ಧ್ವನಿ. ಯಾವ ಕೆಲಸವೇ ಆಗಲಿ, ಕುಳಿತಲ್ಲಿಯೇ ಆಗುವುದಿಲ್ಲ. ಶ್ರಮಪಡಲೇಬೇಕು. ಅನ್ಯಾಯದ ವಿರುದ್ಧ ಸಿಡಿದೆದ್ದಾಗಲೇ ಅದರ ಅಂತ್ಯವಾಗುವುದು. ಈ ಶಂಖಕ್ಕೆ ಏಕೆ ಆ ಹೆಸರಿಟ್ಟರು? ಭೀಮ ಪವನಪುತ್ರ. ಎಲ್ಲೆಲ್ಲೂ ಹರಡುವಂಥಾದ್ದು ಗಾಳಿ. ಭೀಮನ ಮನಸ್ಸಿನ ಅಭಿಪ್ರಾಯವನ್ನು ಶಂಖಧ್ವನಿಯ ಮೂಲಕ ಮೊಳಗಿಸಿದ್ದಾರೆ. ಶತ್ರುಗಳಿಗೆ ಕಂಪನವನ್ನುಂಟು ಮಾಡುವಂತಹ ಧ್ವನಿ ಅದು. ನ್ಯಾಯ, ದಯೆ ಬಿಡಬಾರದು, ಸಾಹಸಕ್ಕೆ ಹೆದರಬಾರದು, ಮುನ್ನಡೆಯಬೇಕು ಎಂಬ ಅಂತರಾಳದ ಧ್ವನಿ 'ಪೌಂಡ್ರಕ' ಶಂಖದ್ದು. ಇದು ನಿಜಕ್ಕೂ ಒಪ್ಪತಕ್ಕ ಮಾತು.

**'ದೇವದತ್ತ':** ಹೆಸರೇ ಸೂಚಿಸುವಂತೆ ದಿವ್ಯಶಕ್ತಿಗಳ ಮೂಲಕ ಪಡೆದ ಶಂಖ. ಅರ್ಜುನನಿಗೆ ಅದನ್ನು ಮೊಳಗಿಸುವ ಅವಕಾಶ ದೊರೆತಿದೆ. ಶ್ರೀಕೃಷ್ಣನ ಆಪ್ತಸಖ, ಭಾವನೆಂಟ, ಅರ್ಜುನನ ಸಾರಥ್ಯವನ್ನೂ ವಹಿಸಿಕೊಂಡು ಧರ್ಮಸ್ಥಾಪನೆಗಾಗಿ ಸಿದ್ಧನಾಗಿದ್ದಾನೆ ಶ್ರೀಕೃಷ್ಣ. ಶ್ರೀಕೃಷ್ಣ ತಾನು ಯುದ್ಧದಲ್ಲಿ ಆಯುಧವನ್ನು ಹಿಡಿಯುವುದಿಲ್ಲವೆಂದು ಮಾತು ಕೊಟ್ಟಿದ್ದ. ಆದರೆ ಅನ್ಯಾಯ, ಅಧರ್ಮಗಳ ಖಂಡನೆಯನ್ನು ಅರ್ಜುನ, ಮತ್ತಿತರರ ಮೂಲಕ ಮಾಡಿಸಲು ಸಂಕಲ್ಪಮಾಡಿದ್ದಾನೆ. ಅದಕ್ಕಾಗಿ ಅರ್ಜುನನನ್ನು ಕಠಿಣ, ತಪಸ್ಸು ಸಾಧನೆಗಳ ಮೂಲಕ ದೇವ-ದೇವಿಯರನ್ನು ಒಲಿಸಿಕೊಳ್ಳುವಂತೆ ಸಲಹೆ ಸೂಚನೆಗಳನ್ನೂ ಕೊಟ್ಟಿದ್ದ. ಹಾಗಾಗಿ ಅರ್ಜುನ ಅನೇಕ ದೇವ-ದೇವಿಯರ ಆಶೀರ್ವಾದಗಳಿಂದ ಪುನೀತನಾಗಿದ್ದಾನೆ. ಧೈರ್ಯ-ಸ್ಥೈರ್ಯವಂತನೂ ಆಗಿದ್ದಾನೆ. ಧರ್ಮಸಂಸ್ಥಾಪನೆಗಾಗಿ ಕುರುಕ್ಷೇತ್ರದ ಧರ್ಮಯುದ್ಧದಲ್ಲಿ ಜಯಗಳಿಸುವ ಮನೋಭಿಲಾಷೆಯನ್ನು 'ದೇವದತ್ತ'ದ ಮೂಲಕ ಹೊರಗೆಡಹಿದ್ದಾನೆ. ಲೋಕಕಲ್ಯಾಣದ ಗುರಿಯನ್ನು ಖಂಡಿತವಾಗಿಯೂ ತಲುಪುತ್ತೇನೆ ಎಂಬ ಘೋಷಣೆಯನ್ನು ಮಾಡಿ



ದ್ದಾನೆ. ಇದಕ್ಕೆ ದೈವಬಲವಿದೆ ಎಂಬುದು ಶಂಖದ ಹೆಸರಿನಲ್ಲಿಯೇ ಅಡಗಿದೆ.

**'ಸುಘೋಷ':** ಒಳ್ಳೆಯ ಸಂದೇಶವನ್ನು ಸಾರಿದ ಶಂಖದ ಒಡೆಯ ನಕುಲ. ಅವನು ಪಾಂಡುವಿನ ಪತ್ನಿ ಮಾದ್ರಿಯು ಅಶ್ವಿನೀದೇವತೆಗಳ ವರದಿಂದ ಪಡೆದ ಅವಳಿ ಮಕ್ಕಳ ಪೈಕಿ ಒಬ್ಬ. ಅಶ್ವಿನೀದೇವತೆಗಳು ದೇವವೈದ್ಯರು. ಸ್ವಸ್ಥತೆ, ಸ್ವಚ್ಛತೆ ಇದ್ದಾಗ ಮನುಷ್ಯನು ದೇಶದ ಸಂಪತ್ತು ಎನಿಸಿಕೊಳ್ಳುತ್ತಾನೆ. ಆರೋಗ್ಯವೇ ಭಾಗ್ಯ, ಅನಾರೋಗ್ಯವೇ ದಾರಿದ್ರ್ಯ. ಧರ್ಮ-ಅಧರ್ಮಗಳು ಸ್ವಾಸ್ಥ್ಯ-ಸ್ವಚ್ಛತೆಯೊಂದಿಗೆ ನಂಟು ಹೊಂದಿರುತ್ತವೆ. ಮನಸ್ಸು ಹದಗೆಟ್ಟಾಗ, ಕಾರ್ಯರೀತಿಯಲ್ಲಿ ಅಸ್ತವ್ಯಸ್ತತೆ ಉಂಟಾಗುತ್ತದೆ. ದೇಹಾರೋಗ್ಯ ಕುಂಠಿತವಾದಾಗಲೂ ಮನಸ್ಸಿನ ಭಾವನೆಗಳು ಏರುಪೇರಾಗುತ್ತವೆ. ಆದ್ದರಿಂದ 'ಸ್ವಸ್ಥಜೀವನವೇ ಧರ್ಮ ಜೀವನ' ಎಂದು ನಕುಲನ 'ಸುಘೋಷ' ಎಂಬ ಶಂಖಧ್ವನಿ ಎಚ್ಚರಿಸುತ್ತದೆ. 'ಸುಘೋಷ' ಘಂಟಾಘೋಷವಾಗಿ ಮೊಳಗಿಸುತ್ತಾನೆ. ಘೋಷಣೆಯಲ್ಲಿ ಕಪಟತನವಿರಬಾರದು. ಆದರೆ ನಕುಲ 'ಸು' ಘೋಷ ಮಾಡಿದ್ದಾನೆ. ಹೃದಯದ ಸ್ವಚ್ಛ-ಸ್ವಸ್ಥತೆಯ ಘೋಷಣೆ.

**'ಮಣಿಪುಷ್ಪಕಂ':** ಕೊನೆಯದಾಗಿ ಸಹದೇವನ 'ಮಣಿ ಪುಷ್ಪಕ'. ಇದರ ಶಂಖಧ್ವನಿಯ ವಿಶೇಷತೆ ಏನೆಂದು ನೋಡೋಣ. ಇಲ್ಲಿ ಎರಡು ಶಬ್ದಗಳಿವೆ. ಮಣಿ ಮತ್ತು ಪುಷ್ಪಕ. ಮಣಿ ಎಂದರೆ ಶಿಲೆ ಎಂದರ್ಥ. ವಿಶೇಷವಾಗಿ ನವಮಣಿಗಳಲ್ಲಿ ಒಂದಾದ ವಜ್ರವೂ ಶಿಲೆಯೇ. ಇದು ಕಠಿಣವಾದದ್ದು. ಮನುಷ್ಯನಲ್ಲಿ ಕಠಿಣ ಸ್ವಭಾವವಿರಬೇಕು. ಅನ್ಯಾಯ, ಅಧರ್ಮಗಳನ್ನು ಎದುರಿಸುವಾಗ ಮೃದುವಾಗಬಾರದು. ಮಾನವೀಯತೆಯಲ್ಲಿ ಹೂವಿನಂತೆ ಮೃದುಸ್ವಭಾವವಿರಬೇಕು. ದೀನ-ದಲಿತರ ಬಗ್ಗೆ, ನೊಂದ ಜೀವಿಗಳ ಬಗ್ಗೆ ಮೃದುವಾಗಿರಬೇಕು. ಈ ಎರಡೂ ಗುಣಗಳ ಧ್ವನಿ ಸಹದೇವನ ಶಂಖ ಮಣಿಪುಷ್ಪಕದಿಂದ ಮೊಳಗಿದೆ. ಕುರುಕ್ಷೇತ್ರದ ಧರ್ಮಯುದ್ಧದಲ್ಲಿ ಈ ಎರಡೂ ಸ್ವಭಾವಗಳ ಮೂಲಕ ಧರ್ಮಕ್ಕೇ ಖಂಡಿತ ಜಯವೆಂಬ ಧ್ವನಿಯನ್ನು ತನ್ನ ಹೃದಯಾಂತರಾಳದಿಂದ ಮೊಳಗಿಸಿದ್ದಾನೆ. ಇಲ್ಲಿ ಮಾನವನ ಜೀವನ ಚಿತ್ರವನ್ನೇ ಬಿಡಿಸಿಟ್ಟಿದ್ದಾನೆ, ಅದರ ಧ್ವನಿಯ ಮೂಲಕ.

ಹೀಗೆ ಜೀವನ ಧರ್ಮವೆಂದರೇನು ಎಂಬುದನ್ನು ಈ ಆರು ಮಂದಿಯ ಶಂಖದ ಹೆಸರುಗಳೇ ಸೂಚಿಸುತ್ತವೆ. 'ಪಾಂಡವರು ನನ್ನ ಪಂಚಪ್ರಾಣಗಳು' ಎಂದಿದ್ದಾನೆ ಶ್ರೀಕೃಷ್ಣ, ಪಂಚಭೂತಗಳು ಪಂಚಪ್ರಾಣಗಳಿಗೆ ಆಧಾರ. ಚೈತನ್ಯವೇ ಆತ್ಮ. ಈ ಆರು ಶಂಖಧ್ವನಿಗಳು ಜೀವನದ, ಧರ್ಮಾಧರ್ಮಗಳ, ಲೋಕಕಲ್ಯಾಣದ ಸಂದೇಶದಂತಿವೆ. ವ್ಯಾಸ ಮಹರ್ಷಿಗಳ ಮಹಾಭರತ ವಿಸ್ತಾರವಾದದ್ದು, ವಿಶಾಲವಾದದ್ದು. ಇಲ್ಲಿ ಪ್ರತಿಯೊಂದು ವಿಷಯಕ್ಕೂ ವಿವರಣೆ ಇದೆ. ಅರಿಯಬೇಕಾದದ್ದು ಬಹಳಷ್ಟಿವೆ. ಭಗವದ್ಗೀತೆಯ ಮೂಲಕ ಅವರು ವಿಶೇಷ ಸಂದೇಶವನ್ನೇ ಜಗತ್ತಿಗೆ ನೀಡಿದ್ದಾರೆ. ತ್ಯಾಗ, ಸೇವೆ, ನೀತಿ, ಧರ್ಮ, ಕರ್ತವ್ಯನಿಷ್ಠೆಯನ್ನು ಕುರಿತು ಜನಸಾಮಾನ್ಯರಿಗೂ ತಿಳಿಯುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಅರಿತವರು ಅದನ್ನೇ ಲೋಕಕಲ್ಯಾಣಕ್ಕಾಗಿ ಹಂಚಲಿ. ಸಮಯಕ್ಕೆ ಒದಗುವಂತಹ ಸದವಕಾಶಗಳನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು.

## ಕವಿ ಪೋತನನ ದೈವಭಕ್ತಿ

ಕವಿ ಪೋತನ ತೆಲುಗು ಭಾಷೆಯಲ್ಲಿ ಶ್ರೀ ಭಾಗವತವನ್ನು ಬರೆದವನು. ಅವನು ಈ ಕೃತಿಯನ್ನು ಆ ರಾಜ್ಯದ ಅರಸನಿಗೆ ಸಮರ್ಪಿಸಬೇಕೆಂದು ಪೋತನನ ಕೆಲವು ಸ್ನೇಹಿತರು ಅವನನ್ನು ಒತ್ತಾಯಿಸಿದರು. ಹಾಗೆ ಮಾಡಿದರೆ ಅವನಿಗೆ ರಾಜನ ಆಶ್ರಯ ಸಿಗುವುದು, ಅಪಾರ ಸಂಪತ್ತು ಕೂಡ ಲಭಿಸುವುದು ಎಂದು ಅವರ ಆಗ್ರಹ. ರಾಜನೂ ಕೂಡ ಪೋತನ ಹಾಗೆ ಮಾಡಲಿ ಎಂದು ಬಯಸಿದ್ದನಂತೆ. ಆದರೆ ಕವಿ ಪೋತನ ದೈವಭಕ್ತನಾಗಿದ್ದ. ತನ್ನ ಕಾವ್ಯಪ್ರತಿಭೆಯು ಭಗವಂತನ ಕೃಪೆ; ಅದನ್ನು ಸಾಕ್ಷಾತ್ಕಾರಕ್ಕಾಗಿ ಬಳಸಬೇಕಲ್ಲದೆ ಮರ್ತ್ಯನಾದ ಅರಸನಿಗೆ ಸಮರ್ಪಿಸಲಾರೆ ಎಂದು ಅವನು ಉತ್ತರಿಸಿದನು. ಅಂತೆಯೇ ಅವನು ತನ್ನ 'ಶ್ರೀ ಮಹಾಭಾಗವತಮು' ಕಾವ್ಯವನ್ನು ದೇವರಿಗೆ ಸಮರ್ಪಿಸಿದ.